ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1708/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮೌಲಾಬಿ** | | |
| **ಗಂಡನ ಹೆಸರು** | **ಖಾದರ್ ಬಾಷಾ** | **ಪಿಡಬ್ಲ್ಯೂ:** | **1** |
| **ವಯಸ್ಸು** | **70 ವರ್ಷ** | **ಸಿಡಬ್ಲ್ಯೂ:** | **1** |
| **ಉದ್ಯೋಗ:** | **ವ್ಯವಸಾಯ** | | |
| **ವಾಸ ಸ್ಥಳ:** | **ನಟರಾಜ ಕಾಲೋನಿ,<br>ಸಿಂಧನೂರು.** | | |

**ದಿನಾಂಕ 30-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ 1, 3 & 4 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-4 ನನ್ನ ಗಂಡ, ಚಾಸಾ-5 ರಿಂದ 7 ನನ್ನ ಮಕ್ಕಳು. ಚಾಸಾ-8 ರಿಂದ 10 ರವರ ಪರಿಚಯ ಇದೆ. ಆರೋಪಿತರು ನನ್ನ ಸಂಬಂಧಿಕರು.

ನಾನು ಓದಿಲ್ಲದ ಕಾರಣ ನನಗೆ ದಿನಾಂಕವನ್ನು ಹೇಳಲು ಬರುವುದಿಲ್ಲ. 3 ವರ್ಷಗಳ ಹಿಂದೆ ಹೂಡಾ ಹೋಬಳಿಯ ನಮ್ಮ ಹೊಲದಲ್ಲಿದ್ದಾಗ, ಆರೋಪಿತರು ಬಂದು ನನಗೆ ಮತ್ತು ಚಾಸಾ-4 ರವರಿಗೆ ಹೊಡೆದಿರುತ್ತಾರೆ. ಆರೋಪಿತರು ನಮಗೆ ಜೀವದ ಬೆದರಿಕೆ ಹಾಕಿರುತ್ತಾರೆ. ಭಾಗದ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಮತ್ತು ಆರೋಪಿತರ ನಡುವೆ ಜಗಳವಾಗಿತ್ತು. ಆರೋಪಿತರು ಚಿನಾಲಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾನು 2 ದಿನ ದವಾಖಾನೆಯಲ್ಲಿ ಇದ್ದೆವು.

ಆದ್ದರಿಂದ ತಡವಾಗಿ ದೂರನ್ನು ಕೊಟ್ಟಿದ್ದೆವು. ಸಾಕ್ಷಿಯು ದೂರನ್ನು ಮತ್ತು ಅದರಲ್ಲಿನ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು ಗುರುತಿಸಲಾಯಿತು.

ಉಳಿದಿದ್ದು ನನಗೆ ನೆನಪಿರುವುದಿಲ್ಲ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ದಿ.01-12-2021 ರಂದು ಮಧ್ಯಾಹ್ನ 12-30 ಕ್ಕೆ ಬಂದಿದ್ದರು ಎಂದರೆ ಸರಿ. ಸದರಿ ಹೊಲ ನನ್ನ ಗಂಡನ ಹೆಸರಿನಲ್ಲಿದೆ ಎಂದರೆ ಸರಿ. ಆರೋಪಿತರು ಅತಿಕ್ರಮ ಪ್ರವೇಶ ಮಾಡಿ, ನಿಮಗೆ ಆರೋಪಿತರು ಲೇಸೂಳೆ, ನಮ್ಮ ಜಮೀನಿನಲ್ಲಿ ಭತ್ತ ಕಟಾವು ಮಾಡಲು ಬಂದಿದ್ದೀರಿ, ಎಷ್ಟು ಸೊಕ್ಕು ನಿಮಗೆ ಎಂದು ಬೈದಿದ್ದರು ಎಂದರೆ ಸರಿ. 1 & 3 ನೇ ಆರೋಪಿತರು ನಿಮ್ಮ ಸೀರೆ ಹಿಡಿದು ಎಳೆದಾಡಿದ್ದರು ಎಂದರೆ ಸರಿ. ನಿಮ್ಮ ಗಂಡನಿಗೆ 2 ನೇ ಆರೋಪಿ ನೂಕಿ, ಕಾಲನ್ನು ತಿರುವಿ, ಕಾಲಿನಿಂದ ನಿಮ್ಮ ಗಂಡನ ಕಾಲಿಗೆ ಒದ್ದು, ಕಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆಗ ನನ್ನ ಗಂಡನ ಕಾಲಿನ ಮೂಳೆ ಮುರಿದಿತ್ತು ಎಂದರೆ ಸರಿ. 1 ನೇ ಆರೋಪಿ ನನ್ನ ಮಗನಿಗೆ ಕಟ್ಟಿಗೆಯಿಂದ ಹೊಡೆ ಬಡೆ ಮಾಡಿ, ಕಣ್ಣಿನ ಕೆಳಗಡೆ ಗುಮುಟಿಯಾಗಿ, ಕೆಂಪಾಗಿತ್ತು ಎಂದರೆ ಸರಿ. 3 & 4 ನೇ ಆರೋಪಿತರು ನನ್ನ ಮಕ್ಕಳಿಗೆ ಬೆನ್ನಿಗೆ ಗುದ್ದಿ, ಹೊಟ್ಟೆಗೆ ಹೊಡೆದು, ನೆಲಕ್ಕೆ ಕೆಡವಿ ಒದ್ದಿದ್ದರು ಎಂದರೆ ಸರಿ. ಆಗ ಚಾಸಾ-8 ರಿಂದ 10 ರವರು ಬಂದು ಜಗಳ ಬಿಡಿಸಿದ್ದರು ಎಂದರೆ ಸರಿ.

ದೂರು ಕೊಟ್ಟ ನಂತರ ದಿ.03-12-2021 ರಂದು ಪೋಲೀಸರು ಬಂದಿದ್ದರು, ಅವರಿಗೆ ನಾನೇ ಸ್ಥಳವನ್ನು ತೋರಿಸಿದ್ದೆ, ಆಗ ಪೋಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ ಒಂದು ಜಾಲಿ ಕಟ್ಟಿಗೆಯನ್ನು ಬೆಳಿಗ್ಗೆ 10-30 ರಿಂದ 11-30 ರವರೆಗೆ ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡಿದ್ದರು ಎಂದರೆ ಸರಿ. ಸಾಕ್ಷಿಯು ಒಂದು ಸರ್ಕಾರಿ ಜಾಲಿ ಕಟ್ಟಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ಮತ್ತು ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಭಾವಚಿತ್ರ ತೆಗೆದಿದ್ದರು. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ ಶ್ರೀ.ಆರ್.ಬಿ. ಆರೋಪಿ ಪರ ವಕೀಲರಿಂದಃ</u>

<u>ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಕಾಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**